5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

ಎಸ್.ಸಿ. ಸಂಃ 10038/2021

ಪಿಡಬ್ಲ್ಯೂ- 08
ಸಿಡಬ್ಲ್ಯೂ- 10

| | | |
|---|---|---|
| ಸಾಕ್ಷಿ ಹೆಸರು | - | ಮಹಾದೇವ |
| ತಂದೆ ಹೆಸರು | - | ಕರಿಯಪ್ಪ |
| ವಯಸ್ಸು | - | 35 ವರ್ಷ |
| ಉದ್ಯೋಗ | - | ವ್ಯವಸಾಯ |
| ವಿಳಾಸಃ | - | ಸಾರೇಕೊಪ್ಪ, ಸೊರಬ ತಾಲ್ಲೂಕು |

ಪ್ರಮಾಣ ವಚನ ಭೋದಿಸಿದ ದಿನಾಂಕಃ 14-09-2023.

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ಪ್ರಾ ಸಾ -1 ಮತ್ತು ಚಾಸಾ-2 ರವರು ನನಗೆ ಗೊತ್ತು. ಪ್ರಾ ಸಾ -2 ರಿಂದ 7 ಮತ್ತು ಚಾಸಾ-9 ಗೊತ್ತು. ಆರೋಪಿತರು ಗೊತ್ತು. ಪ್ರಾ ಸಾ -1 ಮತ್ತು ಚಾಸಾ-2 ಮತ್ತು ಆರೋಪಿತರ ಮದ್ಯೆ ಗಲಾಟೆಯಾದ ಬಗ್ಗೆ ಗೊತ್ತಿದೆ. 4 ವರ್ಷಗಳ ಹಿಂದೆ ಸಂಜೆ 6 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಗಲಾಟೆಯ ಶಬ್ಬ ಹುಣಸೇಕೊಪ್ಪದ ಮಂಜಪ್ಪನ ಮನೆಯ ಬಳಿ ಕೇಳಿಸುತ್ತಿತ್ತು. ಆಗ ನಾನು ಹುಣಸೇಕೊಪ್ಪದ ಮಂಜಪ್ಪನ ಮನೆಯ ಹತ್ತಿರ ಹೋಗಿರುತ್ತೇನೆ, ಆಗ ಗಲಾಟೆ ಮುಗಿದಿತ್ತು. ಪ್ರಾ ಸಾ -1 ಮತ್ತು ಚಾಸಾ-2 ಮತ್ತು ಆರೋಪಿತರ ನಡುವೆ ಪ್ರಾಸಾ -1 ರವರ ತೋಟಕ್ಕೆ ದನಗಳು ನುಗ್ಗಿದ ಬಗ್ಗೆ ಗಲಾಟೆಯಾಗಿರುತ್ತದೆ. ಸದರಿ ದಿನ ಮತ್ತೇನು ಗಲಾಟೆಯಾಯಿತು ಎಂದರೆ ಯಾವ ಗಲಾಟೆ ಆಗಿಲ್ಲ ಎಂದು ನುಡಿಯುತ್ತಾರೆ. ಗಲಾಟೆಯಲ್ಲಿ ಪ್ರಾ ಸಾ -1 ಮತ್ತು ಚಾಸಾ-2 ರವರಿಗೆ ಪೆಟ್ಟಾಗಿರುತ್ತದೆ. ಪ್ರಾ ಸಾ -1 ಮತ್ತು ಚಾಸಾ-2 ರವರಿಗೆ ಯಾರು ಯಾವುದರಿಂದ ಹಲ್ಲೆ ಮಾಡಿದರು ಎಂದು ನನಗೆ ಗೊತ್ತಿಲ್ಲ. ಗಲಾಟೆಯ ಸ್ಥಳದಲ್ಲಿ ಯಾವುದೇ ವಸ್ತುಗಳು ಇರಲಿಲ್ಲ. ನಾನು ಸ್ಥಳಕ್ಕೆ ಹೋದಾಗ ಆರೋಪಿತರು ಯಾರೂ ಅಲ್ಲಿ ಇರಲಿಲ್ಲ. ಮು ಮಾ -1 ರಿಂದ ಮು ಮಾ 3 ಎಲ್ಲಿದ್ದವು ಎಂದರೆ ಮು ಮಾ -2 ಕಲ್ಲು ಲೈಟ್

ಕಂಬದ ಬಳಿ ಬಿದ್ದಿತ್ತು , ಮು ಮಾ -1 , ಮು ಮಾ 3 ನ್ನುನಾನು ನೋಡಲಿಲ್ಲ. ಪ್ರಾ ಸಾ -1 ಮತ್ತು ಚಾಸಾ-2 ಹೇಗೆ ಪೆಟ್ಟಾಗಿತ್ತು ಎಂದು ನನಗೆ ಗೊತ್ತಿಲ್ಲ. ಪೋಲೀಸರಿಗೆ ಈ ಬಗ್ಗೆ ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

ದಿಃ 09-06-2019 ರಂದು ರಾತ್ರಿ 7-30 ಗಂಟೆ ಸಮಯದಲ್ಲಿ ನಾನುಮನೆಯಲ್ಲಿದ್ದಾಗ ಸಾರೆಕೊಪ್ಪದ ಹುಣಸೆಕೊಪ್ಪ ಮಂಜುನಾಥ ರವರ ಮನೆ ಎದುರು ರಸ್ತೆಯಲ್ಲಿ ಜಗಳ ಆಡುತ್ತಿರುವುದು ಕಂಡು ಬಂತು ಎಂದರೆ ಹೌದು. ಕೂಡಲೇ ನಾನು ಈ ದಿನ ಬೆಳಿಗ್ಗೆ ಚೇತನ್ ಇವರ ತೋಟದ ಪಕ್ಕದ ಜಮೀನುದಾರರಾದ ಮಳ್ಳಿ ರಾಮಪ್ಪ ಇವರ ದನಗಳು ತೋಟಕ್ಕೆ ಬಂದು ಹಾಳು ಮಾಡಿದ್ದರಿಂದ ಅವರನ್ನು ಕರೆದು ತೋಟಕ್ಕೆ ದನಗಳನ್ನು ಬಿಡಬೇಡಿ ಎಂದು ಚೇತನ ಹೇಳಿದ್ದರು, ಮಳ್ಳಿ ರಾಜಪ್ಪರವರು ಚೇತನರವರ ಜಮೀನು ಬಳಿ ಬೆಂಕಿಯನ್ನು ಹಾಕಿದ್ದರು ಎಂದರೆ ಹೌದು. ಈ ವಿಚಾರದ ಬಗ್ಗೆ ಗಲಾಟೆಯಾಗುತ್ತಿರಬಹುದೆಂದು ತಿಳಿದು ಕೂಡಲೇ ನಾನು ಅಲ್ಲಿಗೆ ಹೋಗಿ ನೋಡಿದಾಗ ನಮ್ಮ ಗ್ರಾಮದ ಮಳ್ಳಿ ರಾಜಪ್ಪ ಮತ್ತು ಇವರ ಕುಟುಂಬದವರಾದ ಮಳ್ಳಿ ಪರಸಪ್ಪ , ಮಳ್ಳಿ ರಮೇಶ ಬಿನ್ ಬೈರಪ್ಪ , ಮಳ್ಳಿ ಲಿಂಗರಾಜ, ಮಳ್ಳಿ ಅಣ್ಣಪ್ಪ, ಮಳ್ಳಿ ಲೋಕೇಶ, ಮಳ್ಳಿ ಟಾಕಪ್ಪ , ಮಳ್ಳಿ ಕೃಷ್ಣಪ್ಪ ಮತ್ತು ಲಕ್ಷ್ಮಣಪ್ಪ ಮತ್ತು ಇತರೆ ಮಳ್ಳಿ ಕುಟುಂಬಸ್ದರು ಎಲ್ಲರೂ ಸೇರಿಕೊಂಡು ಸಮಾನ ಉದ್ದೇಶ ಹೊಂದಿ ಅಕ್ರಮ ಕೂಟ ಕಟ್ಟಿಕೊಂಡು ತಮ್ಮ ಕೈಯ್ಯಲ್ಲಿ ದೊಳ್ಳೆ ಕಲ್ಲುಗಳನ್ನು ಹಿಡಿದುಕೊಂಡು ನಮ್ಮ ಗ್ರಾಮದ ಚೇತನ್ ಮತ್ತು ಗಣಪತಿ ಮತ್ತು ಅವರ ತಮ್ಮ ಸತೀಶ್ ಇವರನ್ನು ಕೊಲೆ ಮಾಡುವ ಉದ್ದೇಶದಿಂದ ಅಡ್ಡಗಟ್ಟಿ ಅವಾಚ್ಯವಾಗಿ ಬೈದು ನಮ್ಮ ಮನೆತನದವರನ್ನು ವಿರುದ್ಧ ಹಾಕಿಕೂಂಡು ಊರಿನಲ್ಲಿ ಹೇಗೆ ಜೀವನ ಮಾಡುತ್ತೀರಾ ವ್ಹದು ಅವಾಚ್ಯವಾಗಿ ಬೈಯ್ಯುತ್ತಾ ನಿಮ್ಮನ್ನುನಾವು ನೋಡಿಕೊಳ್ಳುತ್ತೇವೆ ಅಂತಾ ಕೂಗುತ್ತಾ ಇದ್ದು ಅದೇ ಸಮಯಕ್ಕೆ ಮಳ್ಳಿ ರಮೇಶ ಈತನ ತನ್ನ

ಕೈಯ್ಯಲ್ಲಿದ್ದ ಕಲ್ಲಿನಿಂದ ಸತೀಶನ ತಲೆಗೆ ಬಲವಾಗಿ ಹೊಡೆದು ರಕ್ತಗಾಯಪಡಿಸಿದ್ದಲ್ಲದೇ ಮೈ ಕೈಗೆ ಹೊಡೆದು ರಕ್ತಗಾಯಪಡಿಸಿದ್ದು ಆಗ ಸತೀಶನು ಸ್ಥಳದಲ್ಲಿ ಕುಸಿದು ಬಿದ್ದಾಗ ಮಳ್ಳಿ ರಾಜಪ್ಪ, ಮಳ್ಳಿ ಪರಸಪ್ಪ , ಮಳ್ಳಿ ಅಣ್ಣಪ್ಪ ಇತರೆಯವರು ಕೈಯಿಂದ ಸತೀಶನ ಮೈಕೆಗೆ ಹೊಡೆದು ಒಳಪೆಟ್ಟು ಮಾಡ್ಡಿಲ್ಲದೇ ಕಾಲಿನಿಂದ ಒದ್ದು ಎಲ್ಲರೂ ಸೇರಿ ಮಾರಣಾಂತಿಕ ಹಲ್ಲೆ ಮಾಡಿ ಬಲವಾದ ರಕ್ತಗಾಯ ಮಾಡಿರುತ್ತಾರೆ ಎಂದರೆ ನಾನು ನೋಡಿಲ್ಲ.

ನಂತರ 2 ನೇ ಆರೋಪಿ ಮಳ್ಳಿ ರಾಜಪ್ಪ ಚಾಸಾ-2 ಮತ್ತುಪ್ರಾ ಸಾ 1 ರವರ ತೋಟಕ್ಕೆ ಬೆಂಕಿ ಹಾಕಿದ್ದರಿಂದ ಅವರ 30-40 ಅಡಿಕೆ ಗಿಡಗಳು ಸುಟ್ಟು ಹೋಗಿರುತ್ತವೆ ಎಂದರೆ 4-5 ಗಿಡಗಳು ಸುಟ್ಟು ಹೋಗಿರುತ್ತವೆ. ಪ್ರಾ ಸಾ 1 ಮತ್ತು ಚಾಸಾ2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಆರೋಪಿತರು ಮು ಮಾ -1 ರಿಂದ ಮು ಮಾ 3 ರಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಹೌದು. ಪ್ರಾ ಸಾ -1 ಮತ್ತು ಚಾಸಾ-2 ರವರಿಗೆ ಆರೋಪಿತರೇ ಹೊಡೆದು ಅವಾಚ್ಯವಾಗಿ ಬೈದಿದ್ದು ಮತ್ತು ಜೀವ ಬೆದರಿಕೆ ಹಾಕಿದ್ದನ್ನು ಕಣ್ಣಾರೆ ನೋಡಿದ್ದಾರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಪ್ರಾ ಸಾ -1 ರವರ ಮನೆ ತವನಂದಿ ಸೊರಬ ರಸ್ತೆಗೆ ಮುಖ ಮಾಡಿ ಇದೆ ಎಂದರೆ ಹೌದು. ಪ್ರಾ ಸಾ -1 ರವರ ಮನೆ ಹಿಂಭಾಗದಲ್ಲಿ ಸುಮರು 1 ಎಕರೆ ಅವರ ತೋಟ ಇದೆ ಎಂದರೆ ಹೌದು. ತೋಟದ ಹಿಂಭಾಗದಲ್ಲಿ ಕಾನಕೇರಿ ರಸ್ತೆ ಇದೆ ಎಂದರೆ ಹೌದು. ನಮ್ಮ ಮನೆ ಮತ್ತು ರಾಜಪ್ಪನ ಮನೆ ಕಾನಕೇರಿ ರಸ್ತೆಗೆ ಮುಖ ಮಾಡಿದೆ ಎಂದರೆ ಹೌದು. ಪ್ರಾ ಸಾ -1 ರವರ ಮನೆಯ ಅಕ್ಕಪಕ್ಕ ಉದ್ದಕ್ಕೂ ಕಾನಕೇರಿ ರಸ್ತೆಯಲ್ಲಿ ಸಾಲು ಮನೆಗಳು ಇವೆ ಎಂದರೆ ಹೌದು. ನಾನು ಮತ್ತು ಪ್ರಾ ಸಾ -1 ಒಂದೇ ಮನೆತನದವರು ಎಂದರೆ ಹೌದು. ಪ್ರಾ ಸಾ -1 ರವರಿಗೆ

ನಾನು ದಾಯಾದಿ ಚಿಕ್ಕಪ್ಪ ಆಗಬೇಕು ಎಂದರೆ ಹೌದು. ಪೋಲೀಸರ ಮುಂದೆ ಹೇಳಿಕೆ ಕೊಡುವ ಮುಂಚೆ ಯಾರ ಹತ್ತಿರವು ಹೇಳಿಕೆ ಕೊಟ್ಟಿಲ್ಲ. ಪೋಲೀಸರ ಮುಂದೆ ದಿಃ04-04-2020 ರಂದು ಪ್ರಥಮವಾಗಿ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಹೌದು. ಘಟನೆಯಾದ ನಂತರ 10 ತಿಂಗಳ ನಂತರ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಹೌದು. ಈ ದಿನ ಪ್ರಾ ಸಾ -1 ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಹೌದು. ಪ್ರಾ ಸಾ -1 ರವರ ಮನೆಯಿಂದ ರಾಜಪ್ಪನ ಮನೆಗೆ ತವನಂದಿ - ಸೊರಬ ರಸ್ತೆಯಿಂದ ಹೋಗಬೇಕಾದರೆ 3 ಕಿ ಮೀ ಆಗುತ್ತದೆ ಎಂದರೆ ಹೌದು. ಪ್ರಾ ಸಾ -1 ರವರ ಮನೆಯಿಂದ 2 ನೇ ಆರೋಪಿ ಮನೆಗೆ ತೋಟದಿಂದ ಹೋದರೆ 20 ಅಡಿ ದೂರ ಎಂದರೆ ಹೌದು.

ತವನಂದಿ - ಸೊರಬ ರಸ್ತೆಯಲ್ಲಿ ಮಂಜಪ್ಪನ ಮನೆಯ ಮುಂದೆ ಗಲಾಟೆಯಾದರೆ ಕೇಳಿಸುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).